**ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ**

ದಿನಾಂಕ : 16-08-2018

# ವರದಿ

## ಪರಿಸರ ಸಂರಕ್ಷಣೆಗೆ ಬೇಕು ಎಲ್ಲರ ಕಾಳಜಿ : ಶ್ರೀ ಜೋಸೆಫ್ ಅಲೆಗ್ಸಾಂಡರ್

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ "ಹಸಿರು ಕರ್ನಾಟಕ"ಕ್ಕೆ ಚಾಲನೆ** :

ಕೊಳ್ಳೇಗಾಲ : ಆಗಸ್ಟ್ 16 : ಪರಿಸರ ಸಂರಕ್ಷಣೆ ಕೇವಲ ಜಾಥಾ, ಜಾಗೃತಿ, ಉಪನ್ಯಾಸಕ್ಕೆ ಸೀಮಿತವಾಗದೆ ಉತ್ತಮ ಯೋಜನೆಗಳನ್ನು ಹಾಕಿ ಕಾರ್ಯರೂಪಕ್ಕೆ ತರುವ ಕೆಲಸ ಪ್ರತಿಯೊಬ್ಬರ ಕಾಳಜಿಯಿಂದ ಆಗಬೇಕಿದೆ ಎಂದು ಎಸ್.ವಿ.ಕೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಆಂಗ್ಲ ಭಾಷಾ ಉಪನ್ಯಾಸಕರಾದ ಶ್ರೀ ಜೋಸೆಫ್ ಅಲೆಗ್ಸಾಂಡರ್ ಅಭಿಪ್ರಾಯಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಪರಿಸರ ಸಂರಕ್ಷಣೆ ಸಮಿತಿಗಳ ವತಿಯಿಂದ ಆಯೋಜಿಸಿದ್ದ "ಹಸಿರು ಕರ್ನಾಟಕ" ಕಾರ್ಯಕ್ರಮದಡಿಯಲ್ಲಿ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ಮನುಷ್ಯನ ಮಿತಿ ಮೀರಿದ ಸ್ವಾರ್ಥದಿಂದಾಗಿ ಪರಿಸರ ತನ್ನ ಸಮತೋಲನ ಕಳೆದುಕೊಂಡು ಜೀವನ ಸಂಕುಲ ವಿನಾಶದತ್ತ ಹೆಜ್ಜೆ ಹಾಕುತ್ತಿರುವುದು ದುರ್ದೈವ. ಪ್ರಕೃತಿಯ ಮೇಲೆ ನಾವು ನಡೆಸುತ್ತಿರುವ ಅವ್ಯಾಹತ ದಾಳಿಗೆ ಈಗಾಗಲೇ ದಂಡ ತೆರುತ್ತಿದ್ದೇವೆ. ನಮ್ಮ ಮುಗಿಲೆತ್ತರಕ್ಕೆ ಬೆಳೆದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪ್ರಾಕೃತಿಕ ಸಂಪನ್ಮೂಲಗಳನ್ನೇ ಹಾಳುಗೆಡುವುತ್ತಿರುವುದು ದುರದೃಷ್ಟಕರ. ಪರಿಸರ ನಾಶದಿಂದಾಗುವ ದುಷ್ಪರಿಣಾಮಗಳ ಅರಿವಿದ್ದರೂ ಪರಸರದ ಬಗ್ಗೆ ಕಾಳಜಿ ನಮ್ಮಲ್ಲಿ ಮೂಡದಿರುವುದು ವಿಪರ್ಯಾಸ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ನಮ್ಮ ಸುತ್ತ ಮುತ್ತಲ ಪರಿಸರವನ್ನು ಸದಾ ಆರೋಗ್ಯವಾಗಿಟ್ಟುಕೊಳ್ಳಬೇಕಿರುವುದು ನಮ್ಮ ಮೂಲ ಕರ್ತವ್ಯ. ಈ ದಿಶೆಯಲ್ಲಿ ಕಾಲೇಜಿನ ಪರಿಸರ ಸಂರಕ್ಷಣಾ ಸಮಿತಿಯು ತೊಡಗಿಸಿಕೊಂಡಿರುವುದು ಸಂತಸದ ವಿಷಯ. ಹಸಿರು ಕರ್ನಾಟಕ ಕಾರ್ಯಕ್ರಮ ದಡಿಯಲ್ಲಿ ಶಾಲಾ ಕಾಲೇಜುಗಳು, ಸರ್ಕಾರಿ ಕಛೇರಿಗಳು, ಸರ್ಕಾರಿ ಒಡೆತನದ ಕಾಡು, ಭೂಮಿ, ಇತರೆ ಪ್ರದೇಶಗಳಲ್ಲಿ ಸಸಿಗಳನ್ನು ನೆಟ್ಟು, ಪೋಷಿಸಿ, ತನ್ಮೂಲಕ ಪರಿಸರ ಕಾಪಾಡಿಕೊಳ್ಳುವುದು ಉತ್ತಮ ಯೋಜನೆಯಾಗಿದ್ದು ನಾವೆಲ್ಲರೂ ಕೈಜೋಡಿಸಬೇಕಿದೆ ಎಂದು ಕರೆ ನೀಡಿದರು.

ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಪ್ರೊ ಎಂ ಬಸವರಾಜು, ಪರಿಸರ ಸಂರಕ್ಷಣಾ ಸಮಿತಿ ಸಂಚಾಲಕರಾದ ಪ್ರೊ. ಬಿ ಮಂಜುನಾಥ್, ಶುಶ್ರೂಷ ಶಾಲೆ ಪ್ರಾಚಾರ್ಯ ಶ್ರೀ ಡಿ ಜಿ ವಿಷಕಂಠಮೂರ್ತಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಎನ್ ಮಹದೇವಸ್ವಾಮಿ, ಪರಿಸರ ಪ್ರೇಮಿಯಾದ ಶ್ರೀ ಮಹೇಶ್ ಪಟೇಲ್, ಶ್ರೀಮತಿ ಎ ಎಸ್ ಸ್ಮಿತಾ ಹಾಗೂ ವಿದ್ಯಾರ್ಥಿನಿಯರು ಸಸಿಗಳನ್ನು ನೆಡುವ ಮೂಲಕ ಕಾರ್ಯಕ್ರಮದಲ್ಲಿ ಹಾಜರಿದ್ದರು.

ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಪರಿಸರ ಸಂರಕ್ಷಣೆ ಸಮಿತಿಗಳ ವತಿಯಿಂದ ಆಯೋಜಿಸಿದ್ದ “ಹಸಿರು ಕರ್ನಾಟಕ” ಕಾರ್ಯಕ್ರಮದಡಿಯಲ್ಲಿ ಎಸ್.ವಿ.ಕೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಆಂಗ್ಲ ಭಾಷಾ ಉಪನ್ಯಾಸಕರಾದ ಶ್ರೀ ಜೋಸೆಫ್ ಅಲೆಗ್ಸಾಂಡರ್‌ರವರು ಸಸಿ ನೆಡುತ್ತಿರುವುದು. ಚಿತ್ರದಲ್ಲಿ ಶ್ರೀ ಮಹೇಶ್ ಪಟೇಲ್, ಶ್ರೀ ಬಿ. ಮಂಜುನಾಥ್, ಶ್ರೀ ಮಹೇಶ್ ಪಟೇಲ್, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಡಿ. ಜಿ ವಿಷಕಂಠಮೂರ್ತಿ, ಶ್ರೀ ಎನ್ ಮಹದೇವಸ್ವಾಮಿ, ಡಾ. ಎಂ. ಪ್ರಭು, ಶ್ರೀಮತಿ ಕೆ ಆರ್ ಉಮಾದೇವಿ, ಶ್ರೀಮತಿ ಎ ಎಸ್ ಸ್ಮಿತಾ ರವರನ್ನು ಕಾಣಬಹುದು.




ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಪರಿಸರ ಸಂರಕ್ಷಣೆ ಸಮಿತಿಗಳ ವತಿಯಿಂದ ಆಯೋಜಿಸಿದ್ದ “ಹಸಿರು ಕರ್ನಾಟಕ” ಕಾರ್ಯಕ್ರಮದಡಿಯಲ್ಲಿ ಸಸಿ ನೆಡುವ ಕಾರ್ಯಕ್ರಮ. ಚಿತ್ರದಲ್ಲಿ ಶ್ರೀ ಎಂ ಬಸವರಾಜು, ಶ್ರೀ ಬಿ. ಮಂಜುನಾಥ್, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಮಹೇಶ್ ಪಟೇಲ್, ಡಾ. ಎಂ. ಪ್ರಭು, ಶ್ರೀಮತಿ ಕೆ ಆರ್ ಉಮಾದೇವಿ, ಶ್ರೀ ಡಿ. ಜಿ ವಿಷಕಂಠಮೂರ್ತಿ, ಶ್ರೀ ಎನ್ ಮಹದೇವಸ್ವಾಮಿ, ಶ್ರೀಮತಿ ಎ ಎಸ್ ಸ್ಮಿತಾ ಹಾಗೂ ಶ್ರೀ ಕೆ ಎಸ್ ಪ್ರಕಾಶ್ ರವರನ್ನು ಕಾಣಬಹುದು.

